# 3ನೇ ಅಪರ ಮುಖ್ಯ ಮಹಾನಗರ ದಂಡಾಧಿಕಾರಿಗಳ ನ್ಯಾಯಾಲಯ,
# ಬೆಂಗಳೂರು ನಗರ.

**ಸಿಸಿ.ನಂ. 10973/2019 ಚಾಸಾ-1 ಪ್ರಾಸಾ- 1**

| | |
|---|---|
| **ಸಾಕ್ಷಿದಾರರ ಹೆಸರು** | ಅಬ್ದುಲ್ ಸಲೀಂ .ಕೆ. |
| **ತಂದೆಯ ಹೆಸರು** | ಕೊಯ ಕುಟ್ಟಿ , |
| **ವಯಸ್ಸು** | 62 ವರ್ಷ. |
| **ಉದ್ಯೋಗ** | ಬಿಸಿನೆಸ್, |
| **ವಾಸ** | ಕೊಲ್ಲಂ, ಕೇರಳ. |
| **ಪ್ರಮಾಣೀಕರಿಸಿದ ದಿನಾಂಕ** | 10.12.2025. |

**ಕಲಂ.299 ರ ಅಡಿಯಲ್ಲಿ ಮುಖ್ಯ ವಿಚಾರಣೆ : ಹಿ.ಸ ಸ. ಅಭಿಯೋಜಕರವರಿಂದ :**

ನನಗೆ ಈ ಪ್ರಕರಣದ ಆರೋಪಿತರು ಗೊತ್ತು. ನಾನು 2016 ರಲ್ಲಿ ನನ್ನ ಮಗಳ ವಿದ್ಯಾಭ್ಯಾಸಕ್ಕಾಗಿ ಕರ್ನಾಟಕದ ಬೆಂಗಳೂರಿಗೆ ಬಂದಿರುತ್ತದೆ. ನನ್ನ ಮಗಳನ್ನು ಹೊಸೂರು ರಸ್ತೆಯಲ್ಲಿರುವ ಕ್ರೈಸ್ತ್ ಕಾಲೇಜಿನಲ್ಲಿ ಇಂಗ್ಲೀಷ್, ಸೋಶಿಯಲಾಜಿ ಮತ್ತು ಸೈಕಾಲಜಿ ವಿಷಯಗಳಲ್ಲಿ ಬಿಎ ಪದವಿಗೆ ಸೀಟು ಕೊಡಿಸುತ್ತೇನೆ ಎಂದು ಒಂದನೇ ಆರೋಪಿಯು ನನಗೆ ತಿಳಿಸಿರುತ್ತಾನೆ. ನಂತರ ಒಂದನೇ ಆರೋಪಿಯು ನನಗೆ ಕಾಲೇಜಿನ ಸಿಂಡಿಕೇಟ್ ನ ಸದಸ್ಯರು ನನಗೆ ಪರಿಚಯವಿರುತ್ತಾರೆ ಎಂದು ಹೇಳಿದ್ದರು. ಒಂದನೇ ಆರೋಪಿಯಿಂದ ನನಗೆ ಎರಡು ಮತ್ತು ಮೂರನೇ ಆರೋಪಿತರು ಪರಿಚಯವಾಗಿರುತ್ತಾರೆ. ದಿ.08.06.2016 ರಂದು ಎರಡು ಮತ್ತು ಮೂರನೇ ಆರೋಪಿತರು ಹಾಗೂ ನನ್ನ ನಡುವೆ ಮಾತುಕತೆಯಾಗಿರುತ್ತದೆ. ಅದರಂತೆ ಎರಡು ಮತ್ತು ಮೂರನೇ ಆರೋಪಿತರು ರೂ.7ಲಕ್ಷ ಹಣಕ್ಕೆ ನನ್ನ ಮಗಳಿಗೆ ಸದರಿ ಕಾಲೇಜಿನಲ್ಲಿ ಸೀಟು ಕೊಡಿಸುವುದಾಗಿ ಹೇಳಿರುತ್ತಾರೆ. ಚಾಸಾ-4 ರವರು ನನಗೆ ಪರಿಚಯವಿದ್ದು, ಅವರ ಕಛೇರಿಯಲ್ಲಿ ರೂ.7ಲಕ್ಷ ಹಣವನ್ನು ಎರಡನೇ ಆರೋಪಿಯ ಕೈಗೆ ನಗದಾಗಿ ನೀಡಿರುತ್ತೇನೆ. ಸದರಿ ಎರಡನೇ ಆರೋಪಿಯು ಮೂರನೇ ಆರೋಪಿಯ ಕೈಗೆ ಸದರಿ ಹಣವನ್ನು ನೀಡಿರುತ್ತಾನೆ. ಎರಡನೇ ಆರೋಪಿಯು ಅವರನ್ನು ಸಂಪರ್ಕಿಸಲು ವಿಜಿಟಂಗ್ ಕಾರ್ಡ್ ಮತ್ತು ಬ್ರೋಚರ್ ಗಳನ್ನು ನೀಡಿರುತ್ತಾರೆ. ಆರೋಪಿತರು ಕೇರಳದ ಎರ್ನಾಕುಲಂ ನಲ್ಲಿಯು ಸಹ ಕಛೇರಿ ಇದೆ ಎಂದು ತಿಳಿಸಿದ್ದರು. ಆರೋಪಿತರು ಮೂರು ದಿನಗಳ ಒಳಗೆ ನಿಮ್ಮ ಮಗಳಿಗೆ ಅಡ್ಮಿಷನ್ ಕೊಡಿಸುತ್ತೇವೆ, ಅಡ್ಮಿಷನ್ ಕೊಡಿಸದೇ ಇದ್ದರೇ ನಿಮ್ಮ ಹಣವನ್ನು ವಾಪಸ್ ಕೊಡುತ್ತೇವೆ ಎಂದು ಹೇಳಿದ್ದರು. ಆದರೆ ಮೂರು ದಿನಗಳ ನಂತರ ಆರೋಪಿತರು ನನ್ನ ಮಗಳಿಗೆ ಯಾವುದೇ ಅಡ್ಮಿಷನ್ ಕೊಡಿಸಿದೇ ಇದ್ದಾಗ

ನಾನು ಆರೋಪಿತರು ನೀಡಿದ್ದ ನಂಬರ್ ಗೆ ಕರೆ ಮಾಡಿರುತ್ತೇನೆ. ಆದರೆ ಅವರು ನನ್ನ ಕರೆಗೆ ಯಾವುದೇ ಸ್ಪಂದಿಸಲಿಲ್ಲ. ನಾನು ಸುಮಾರು ಒಂದೂವರೆ ತಿಂಗಳ ಕಾಲ ಕಾದಿರುತ್ತೇನೆ. ಆರೋಪಿತರು ನನ್ನ ಮಗಳಿಗೆ ಸೀಟು ಕೊಡಿಸದೇ ಇರುವ ಕಾರಣ ನಾನು ಸೆಂಟ್ ಜೋಸೆಫ್ ಕಾಲೇಜಿನಲ್ಲಿ ನನ್ನ ಮಗಳಿಗೆ ಬಿಎ ಐಚ್ಛಿಕ ವಿಷಯಗಳಾದ ಇಂಗ್ಲೀಷ್, ಸೋಶಿಯಲಾಜಿ ಮತ್ತು ಸೈಕಾಲಜಿಗಳಲ್ಲಿ ಅಡ್ಮಿಷನ್ ಮಾಡಿಸಿರುತ್ತೇನೆ. ಪುನಃ ಎರಡು ತಿಂಗಳ ನಂತರ ಕೇರಳ ವಿಳಾಸಕ್ಕೆ ಹೋಗಿ ಹುಡುಕಿದಾಗ ಆರೋಪಿತರು ಕೇರಳದಲ್ಲಿ ಯಾವುದೇ ಕಛೇರಿಯನ್ನು ಹೊಂದಿರಲಿಲ್ಲ. ಪುನಃ ಒಂದು ತಿಂಗಳ ನಂತರ ಫೋನ್ ಮೂಲಕ ಸಂಪರ್ಕಿಸಿದಾಗ ಆರೋಪಿತರು ನನಗೆ ಸರಿಯಾಗಿ ಸ್ಪಂದಿಸಲಿಲ್ಲ. ನಂತರ ನನಗೆ ಆರೋಪಿತರು ನನಗೆ ಮೋಸ ಮಾಡಿರುತ್ತಾರೆ ಎಂದು ಗೊತ್ತಾಯಿತು. ಹಾಗಾಗಿ ನಾನು ಬೆಂಗಳೂರು ಕಮೀಷನರವರಿಗೆ ದೂರನ್ನು ನೀಡಿರುತ್ತೇನೆ. ಸಾಕ್ಷಿಯು ದೂರಿನಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಸದರಿ ದೂರನ್ನು ನಿಪಿ.1 ಎಂದು ಸಹಿಯನ್ನು ನಿಪಿ.1(ಎ) ಎಂದು ಗುರುತಿಸಲಾಯಿತು. ಮೂರನೇ ಆರೋಪಿಯು ಒಂದು ವೇಳೆ ನನ್ನ ಮೇಲೆ ನೀವು ದೂರನ್ನು ಸಲ್ಲಿಸಿದರೆ ನಿನ್ನ ಮಗಳನ್ನು ಪರೀಕ್ಷೆಯನ್ನು ಬರೆಯಲು ಬಿಡುವುದಿಲ್ಲ ಮತ್ತು ನಿನ್ನ ಮಗಳನ್ನು ಮುಗಿಸಿಬಿಡುತ್ತೇವೆ ಎಂದು ಬೆದರಿಕೆ ಹಾಕಿರುತ್ತಾರೆ. ನಾನು ಈ ಸಂಬಂಧ ದಿ.15.02.2017 ರಂದು ಮುಂದುವರೆದ ಹೇಳಿಕೆಯನ್ನು ಪೀಣ್ಯ ಪೊಲೀಸರಿಗೆ ನೀಡಿರುತ್ತೇನೆ.

**ಮರು ವಿಚಾರಣೆ ಇಲ್ಲ**

**(ಸಾಕ್ಷಿಗೆ ಮಲಯಾಳಂ ಭಾಷೆ ಮಾತ್ರ ಬರುತ್ತಿದ್ದು, ಕನ್ನಡ ಮತ್ತು ಇಂಗ್ಲೀಷ್ ಭಾಷೆಗಳು ಬರುವುದಿಲ್ಲ ಎಂದು ತಿಳಿಸಿರುತ್ತಾರೆ. ಶ್ರೀ.ಪಿಎಸ್ ಎ ವಕೀಲರವನ್ನು ಭಾಷಂತರರನ್ನಾಗಿ ನೇಮಕ ಮಾಡಿದ್ದು, ಸದರಿ ವಕೀಲರು ಸಾಕ್ಷಿಗೆ ಮಲಯಾಳಂ ಭಾಷೆಯಲ್ಲಿ ಕೇಳಿ, ಸಾಕ್ಷಿ ಹೇಳಿದ್ದನ್ನು ಕನ್ನಡ ಭಾಷಗೆ ತರ್ಜುಮೆ ಮಾಡಿ ಹೇಳಿದ್ದನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು.)**

**ಓ.ಹೇ.ಕೇ.ಸ.ಇದೆ**

**3ನೇ ಎ.ಸಿ.ಜೆ.ಎಮ್.ನ್ಯಾ.**
**ಬೆಂಗಳೂರು.**